ದಿನಾಂಕ 29.01.2021 ರಂದು ಸಾಕ್ಷಿಯ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರ ಶ್ರೀ ಡಿ ಆರ್ ವಕೀಲರಿಂದಃ

ನಾವು ಗೊರೂರಿನಲ್ಲಿ ವಾಸವಿರುತ್ತೇವೆ. ಹಬ್ಬ ಮತ್ತು ವಿಶೇಷ ದಿನಗಳಲ್ಲಿ ಮಾತ್ರ ನೈಗೆರೆ ಬಂದು ಹೋಗುತ್ತೇವೆ ಎಂದರೆ ಸರಿ. ನಮ್ಮ ಮನೆ ಊರಿನಿಂದ ಹೊರಗೆ ಜಮೀನಿನಲ್ಲಿ ಇದೆ. ಬೀದಿ ದೀಪ ನಮ್ಮ ಮನೆ ಮುಂದೆ ಇದೆ. ಸದರಿ ಬೀದಿ ದೀಪ ಇರುವ ಜಾಗ ನಮ್ಮ ಹಿಸ್ಸೆಯಲ್ಲಿದೆ ಎನ್ನುವುದು ಸುಳ್ಳು. ನಾವು ಮತ್ತು ಆರೋಪಿತರು ಒಂದೇ ಮನೆಯಲ್ಲಿ ಎರಡು ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ವಿದ್ಯುತ್ ದೀಪ ನಮ್ಮ ಭಾಗದ ಕಡೆ ಇದೆ ಎನ್ನುವುದು ಸರಿ. ನಮ್ಮ ಮನೆಯ ಅಕ್ಕಪಕ್ಕ ಸುಮಾರು ನೂರು ಅಡಿ ಅಂತರದಲ್ಲಿ 10 ರಿಂದ 15 ಮನೆಗಳು ಇವೆ. ಹಬ್ಬದ ದಿನಗಳಲ್ಲಿ ಎಲ್ಲಾ ಮನೆಗಳಲ್ಲೂ ಜನರು ಇರುತ್ತಾರೆ ಎಂದರೆ ಸರಿ. ದೂರಿನಲ್ಲಿ ಜಮೀನಿನ ಪರಿಹಾರದ ಹಣ ಕೊಡುವ ಬಗ್ಗೆ ಗಲಾಟೆಯಾಯಿತು ಎಂದು ಹೇಳಿರುತ್ತೇನೆ. ಹಬ್ಬಕ್ಕೆ ಎರಡು ದಿನ ಮುಂಚಿತವಾಗಿ ಗಲಾಟೆಯಾಗಿರುತ್ತದೆ. ಸುಮಾರು 12.00 ರಿಂದ 1.00 ಗಂಟೆ ಸಮಯ ಗಲಾಟೆಯಾಯಿತು. 1 ನೇ ಆರೋಪಿ ತೊಡೆಗೆ ಹಲ್ಲೆ ಮಾಡಿರುತ್ತಾರೆ. ಗಲಾಟೆಯಾದ ಸಮಯದಲ್ಲಿ ಗ್ರಾಮಸ್ಥರು ಸ್ಥಳಕ್ಕೆ ಬರಲಿಲ್ಲ. ಚಾಸಾ 3 ಗಲಾಟೆ ಬಿಡಿಸಿದರು. ಆಸ್ಪತ್ರೆಗೆ 2.00 ಗಂಟೆ ಸುಮಾರಿಗೆ ಬಂದೆವು. ಅರಕಲಗೂಡು ಆಸ್ಪತ್ರೆಯಲ್ಲಿ 5.00 ಗಂಟೆಯವರೆಗೆ ಇದ್ದೆವು ನಂತರ ಹಾಸನಕ್ಕೆ ಹೋದೆವು. ಹಾಸನ ಆಸ್ಪತ್ರೆಯಲ್ಲಿ ಒಂದು ದಿನ ಚಿಕಿತ್ಸೆ ಪಡೆದೆವು. ಗಲಾಟೆಯಾದ ಮಾರನೇ ದಿನ ದೂರು ಕೊಟ್ಟಿರುತ್ತೇನೆ. ದಿನಾಂಕ ಹೇಳಲು ಆಗುವುದಿಲ್ಲ. ನಿಪಿ 2 ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಚಾಸಾ 3 ಮತ್ತು 5 ರವರೂ ಸಹ ಠಾಣೆಯಲ್ಲಿ ಅವುಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿಲ್ಲ ಎನ್ನುವುದು ಸುಳ್ಳು. ಸ್ಥಳದಲ್ಲಿ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ. ಜಮೀನಿನ ವಿಚಾರಕ್ಕಾಗಿ ನಮ್ಮ ಮತ್ತು ಆರೋಪಿತರ ನಡುವೆ ಈ ಹಿಂದಿನಿಂದಲೂ ವೈಷಮ್ಯ ಇದೆ ಎಂದರೆ ಸರಿ. ಅವರ ಮೇಲೆ ವೈಷಮ್ಯ ಇರುವ ಕಾರಣ ಆರೋಪಿತರ ಮನೆಗೆ ಬೆಳಕು ಬಾರದಂತಾಗಲೀ ಎಂದು ಲೈಟ್ ಗಳನ್ನು ನಾವೇ ಒಡೆದಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವನ್ನು ಪ್ರಶ್ನಿಸಿದಾಗ ನಾವೇ ಆರೋಪಿತರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಒಂದು ಫೋಟೋ ತೋರಿಸಿ ಸದರಿ ಫೋಟೋದಲ್ಲಿ ಎಡಭಾಗದಲ್ಲಿ ಕಾಣುವ ಹಸಿರು ಬಣ್ಣದ ಮನೆ ಆರೋಪಿತರ ಮನೆ ಬಲಭಾಗದಲ್ಲಿ ಕಾಣುವ ಮನೆ ನಮ್ಮ ಮನೆ ಎಂದರೆ ಸರಿ. ಸದರಿ ಫೋಟೋವನ್ನು ನಿಡಿ 1 ಎಂದು ಗುರುತಿಸಲಾಯಿತು. ನಾವು, ಆರೋಪಿತರು ಮನೆ ಮುಂದೆ ಅಡ್ಡಾಡದಂತೆ ತೆಂಗಿನ ಗರಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಲೈಟ್ ಕಂಬದಲ್ಲೂ ಸಹ ತೆಂಗಿನ ಗರಿಗಳನ್ನು ಹಾಕಿ ಅಡ್ಡಿಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತರು ಯಾವುದೇ ಗಲಾಟೆ ಮಾಡಿಲ್ಲ , ಹಲ್ಲೆ ಮಾಡಿಲ್ಲ , ಪರಿಹಾರದ ಹಣ ಕೊಡಲಿ ಎಂದು ಸುಳ್ಳು ದೂರುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 5 ನೇ ಆರೋಪಿ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪೊಲೀಸರೊಂದಿಗೆ ಷರೀಖ್ ಆಗಿ ಸುಳ್ಳು ದೂರುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇದೆ.

ಜೆಎಂಎಫ್‌ಸಿ, ಅರಕಲಗೂಡು